**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಚನ್ನರಾಯಪಟ್ಟಣ**

**ಸಿಸಿ ಸಂಖ್ಯೆ: 71/2023** **CW**–2 **PW**–2

**ಸಾಕ್ಷಿಯನ್ನು ದಿಃ 19.02.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಹೆಸರುಃ | ವಿನಯ್ ಕುಮಾರ್ |
| ತಂದೆಯ ಹೆಸರುಃ | ಶಂಭುಲಿಂಗಪ್ಪ |
| ವಯಸ್ಸುಃ | 42 ವರ್ಷ |
| ವೃತ್ತಿಃ | ಎಸ್ ಡಿ ಎ ತಹಸೀಲ್ದಾರ್ ಕಛೇರಿ |
| ವಾಸ ಸ್ಥಳಃ | ಚನ್ನರಾಯಪಟ್ಟಣ |

**ಮುಖ್ಯವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ನಾನು ಡಿಸೆಂಬರ್ 2013 ರಿಂದ ನಾನು ಚನ್ನರಾಯಪಟ್ಟಣ ತಹಸೀಲ್ದಾರ್ ಕಛೇರಿಯಲ್ಲಿ ಎಸ್ ಡಿ ಎ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ 17.11.2022 ರಂದು ಬೆಳಗ್ಗೆ 10.45 ರಿಂದ 11.00 ಗಂಟೆ ಸಮಯದಲ್ಲಿ ನಾನು ನನ್ನ ಕಛೇರಿಯಲ್ಲಿ ಕರ್ತವ್ಯದಲ್ಲಿದ್ದು ನಮ್ಮ ಕಛೇರಿಯ ಮುಂಭಾಗದ ಬಾಗಿಲಿನಲ್ಲಿ ಕೂಗಾಡುವ ಶಬ್ದ ಬರುತ್ತಿದ್ದು, ನಾನು ಮತ್ತು ಚಾಸಾ–3 ರವರು ಹೊರೆಗೆ ಬಂದು ನೋಡಿದಾಗ ಚಾಸಾ–1 ರವರಿಗೆ ಒಬ್ಬ ವ್ಯಕ್ತಿ ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದು ಕಲ್ಕೆರೆ ಗ್ರಾಮದ ಜಮೀನು ಸರ್ವೆ ನಂ. 79 ರ ದುರಸ್ತಿ ಕ್ರಮ ಏಕೆ ಕೈಗೊಂಡಿಲ್ಲ ಎಂದು ಬೈಯುತ್ತಿದ್ದರು. ನಾನು ಮತ್ತು ಚಾಸಾ–3 ರವರು ಮತ್ತು ಸಾರ್ವಜನಿಕರು ಜಗಳ ಬಿಡಿಸಿರುತ್ತೇವೆ. ಚಾಸಾ–1 ರವರ ಕರ್ತವ್ಯಕ್ಕೆ ಆರೋಪಿ ಅಡ್ಡಿಪಡಿಸಿರುತ್ತಾರೆ.

ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

ಸಾಕ್ಷಿ ನಿಪಿ–4 ರಲ್ಲಿ ದಿಃ 17.11.2022 ರಂದು ತನ್ನ ಸಹಿ ಇರುವುದನ್ನು ಗುರುತಿಸಿದ್ದು, ಅದನ್ನು ನಿಪಿ–4 (ಬಿ) ಎಂದು ಗುರುತಿಸಲಾಯಿತು.

ಈ ಸಂಬಂಧ ನಾನು ಪೋಲೀಸರಿಗೆ ಹೇಳಿಕೆ ನೀಡಿದ್ದೇನೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಬಿ ವಿ ವಿ ರವರಿಂದ ಃ**

ಆ ದಿನಾಂಕದದು ಕಛೇರಿಯ ರೆಕಾರ್ಡ್ ರೂಮಿನಲ್ಲಿ ಕೆಲಸ ಮಾಡುತ್ತಿದ್ದೆ. ರೆಕಾರ್ಡ್ ರೂಮು ಕಛೇರಿಯ ಮೊದಲನೇ ಮಹಡಿಯ ಬಲಭಾಗದಲ್ಲಿದೆ ಎಂದರೆ ಸರಿ. ಇತರೆ ಸಿಬ್ಬಂಧಿಗಳು ಟಪಾಲು ವಿಭಾಗದಲ್ಲಿ ಸಹ ಕೆಲಸ ಮಾಡುತ್ತಾರೆ ಎಂದರೆ ಸರಿ. ಶಬ್ದ ಕೇಳಿಸಿದ ನಿರ್ಧಿಷ್ಟ ಸಮಯ ನೆನಪಿಲ್ಲ. ಕೇಳಿಸಿದ 2 ನಿಮಿಷಕ್ಕೆ ಕೆಳಗೆ ಬಂದಿರುತ್ತೇನೆ. ಅಲ್ಲಿ 3–4 ಜನ ಮಾತ್ರ ಇದ್ದರು. ಅವರ ಹೆಸರು ಗೊತ್ತಿಲ್ಲ. ಅಲ್ಲಿ ಲಕ್ಷಮ್ಮ ಎಂಬ ಮಹಿಳೆ ಇದ್ದರೊ ಇಲ್ಲವೊ ಗೊತ್ತಿಲ್ಲ. ಅ ಸಮಯದಲ್ಲಿ ಪೋಲೀಸರು ಬಂದಿರಲಿಲ್ಲ. ನನ್ನ ಹೇಳಿಕೆಯನ್ನು ಪೋಲೀಸರು ಟೈಪ್ ಮಾಡಿಕೊಂಡಿರುತ್ತಾರೆ. ಹೇಳಿಕೆಯನ್ನು ಸಂಜೆ ನೀಡಿರುತ್ತೇನೆ. ನಾನು ಆ ದಿನ ಕಛೇರಿಯಲ್ಲಿ ಇರಲಿಲ್ಲ. ಚಾಸಾ–1 ರವರ ಮಾತು ಕೇಳಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಲ್ಲಿ ಯಾವುದೇ ಗಲಾಟೆ ಆಗಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ).**

**ಓ ಹೇ ಕೇ ಸರಿ ಇದೆ.**

**(ಕುಸುಮ ವಿ.)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ.**